# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 301 | Pages. 2 | Date: 24-10-2025, FRIDAY | RNI NO: KARKAN/2024/89601 | Kannada Daily

ಸಂಪುಟ : 01 - ಸಂಚಿಕೆ : 301 - ಪುಟಗಳು : 2 24-10-2025 ಶುಕ್ರವಾರ | Ph: 8762954248 | ದರ : ₹1


# ಅಧಿದೇವತೆ ಹಾಸನಾಂಬ ದರ್ಶನೋತ್ಸವ ಸಂಪನ್ನ

## 26 ಲಕ್ಷ ಭಕ್ತರಿಂದ ದರ್ಶನ | ಅಚ್ಚುಕಟ್ಟು ವ್ಯವಸ್ಥೆಗೆ ವ್ಯಾಪಕ ಮೆಚ್ಚುಗೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ವರ್ಷಕ್ಕೊಮ್ಮೆ ದರ್ಶನ ನೀಡುವ ಶಕ್ತಿದೇವತೆ ಹಾಸನಾಂಬ ಜಾತ್ರಾ ಮಹೋತ್ಸವಕ್ಕೆ ಗುರುವಾರ ವಿಧ್ಯುಕ್ತ ತೆರೆ ಬಿದ್ದಿತು.

ಅ.9 ರಿಂದ 23ರ ವರೆಗೆ ಹಗಲು-ರಾತ್ರಿ ಲಕ್ಷಾಂತರ ಭಕ್ತರಿಗೆ ದರ್ಶನ ಕರುಣಿಸಿದ ದೇವಿಯ ಗರ್ಭಗುಡಿ ಬಾಗಿಲನ್ನು ಮಧ್ಯಾಹ್ನ 1.06 ನಿಮಿಷಕ್ಕೆ ಶಾಸ್ತ್ರೋಕ್ತವಾಗಿ ಮುಚ್ಚಲಾಯಿತು. ಮಹಾ ಮಂಗಳಾರತಿ ನಂತರ ಗಂಟೆ ಮೊಳಗಿತು. ಅದರ ಬೆನ್ನಲ್ಲೆ ಜಯಘೋಷ ಮೊಳಗಿದವು.

ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ನಿಶ್ಚಲಾನಂದನಾಥ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ, ಸಂಸದ ಶ್ರೇಯಸ್ ಪಟೇಲ್, ಶಾಸಕರಾದ ಕೆ.ಎಂ.ಶಿವಲಿಂಗೇಗೌಡ, ಹೆಚ್.ಪಿ.ಸ್ವರೂಪ್, ಸಿಮೆಂಟ್ ಮಂಜು, ಮಾಜಿ ಎಂಎಲ್‌ಸಿ ಎಂ.ಎ. ಗೋಪಾಲಸ್ವಾಮಿ, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಪಂ ಸಿಇಒ ಬಿ.ಆರ್.ಪೂರ್ಣಿಮಾ, ದಕ್ಷಿಣ ವಲಯ ಐಜಿಪಿ ಡಾ.ಬೋರಲಿಂಗಯ್ಯ, ಎಸ್ಪಿ ಮೊಹಮ್ಮದ್ ಸುಜೀತಾ, ಎಸಿ ಮಾರುತಿ ಮೊದಲಾದವರು ಇದ್ದರು.

ಹಾಸನಾಂಬ ಕಡೆಯ ಸಾರ್ವಜನಿಕ ದರ್ಶನ ದಿನವಾದ ಬುಧವಾರ ಸಹ, ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದು ಪುನೀತರಾದರು. ಆಗಾಗ ಸುರಿದ ಮಳೆಯನ್ನೂ ಲೆಕ್ಕಿಸದೆ ಸರದಿ ಸಾಲು ಮೊದಲಾದ ಕಡೆಗಳಿಂದ ಆಗಮಿಸಿ ಅಮ್ಮನವರನ್ನು ಎದುರುಗೊಂಡು ವಿಶೇಷ ಪೂಜೆ ಸಲ್ಲಿಸಿದರು.

ಬುಧವಾರ ಬೆಳಿಗ್ಗೆ 5.30 ರಿಂದ ಸಂಜೆ 7 ರವರೆಗೆ ತಡೆರಹಿತ ದರ್ಶನ ವ್ಯವಸ್ಥೆ ಮಾಡಲಾಗಿತ್ತು. ಸಂಜೆ 7 ಗಂಟೆಗೆ ಸಾರ್ವಜನಿಕ ದರ್ಶನ ಸ್ಥಗಿತಗೊಳಿಸಲಾಯಿತು. ಆದರೆ ಸಂಜೆ 5 ಗಂಟೆಯೊಳಗೆ ಒಳ ಬಂದವರಿಗೆ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು.

ಮಧ್ಯರಾತ್ರಿ ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ನಡೆಯಿತು. ಸಾವಿರಾರು ಭಕ್ತರು ಉತ್ಸವದಲ್ಲಿ ಭಾಗಿಯಾಗಿದ್ದರು. ಮಧ್ಯರಾತ್ರಿ 12 ಗಂಟೆಯಿಂದ ಬೆಳಗ್ಗೆವರೆಗೆ ಸ್ಥಳೀಯರಿಗೆ ಹಾಗೂ ಸುತ್ತಮುತ್ತಲ ಜನರಿಗೆ ದರ್ಶನ ವ್ಯವಸ್ಥೆ ಕಲ್ಪಿಸಲಾಗಿತ್ತು.



> ಮುಂದಿನ ವರ್ಷದ ಹಾಸನಾಂಬ ಉತ್ಸವ ದಿನಾಂಕವನ್ನು ಪಂಚಾಂಗದ ಪ್ರಕಾರ, ಈ ವರ್ಷವೇ ನಿಗದಿ ಮಾಡಲಾಗಿದೆ. ಅದರಂತೆ 2026 ಅಕ್ಟೋಬರ್ 29 ರಿಂದ ನ.11 ರವರೆಗೆ ಜಾತ್ರೋತ್ಸವ ನೆರವೇರಲಿದೆ.

ದೇವಾಲಯದ ಬಳಿಯಿಂದ ಉತ್ಸವ ಮೂರ್ತಿಯನ್ನು ಹೊತ್ತು ಸಾಗಿದ ರಥವು, ನಗರದ ಪ್ರಮುಖ ಬೀದಿಗಳಲ್ಲಿ ಸಂಚರಿಸಿತು. ಬೆಳಗ್ಗೆ ಹಾಸನಾಂಬೆ ದೇವಾಲಯ ಆವರಣದಲ್ಲಿ ಕೊಂಡೋತ್ಸವ ನಡೆಯಿತು. ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಕೆಂಡ ಹಾಯುವ ಮೂಲಕ ಭಕ್ತಿ ಮೆರೆದರು.

ಹಾಸನಾಂಬ ದರ್ಶನ ಮತ್ತು ಶ್ರೀ ಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಗುರುವಾರ ಬೆಳಿಗ್ಗೆ ನಡೆದ ಕೊಂಡೋತ್ಸ ವ ಕಾರ್ಯಕ್ರಮ ಭಕ್ತಿ, ಭಾವನಾಭರಿತ ವಾತಾವರಣದಲ್ಲಿ ಅದ್ಧೂರಿಯಾಗಿ ನೆರವೇರಿತು. ಬೆಳಗಿನ ಜಾವದಿಂದಲೇ ದೇವಾಲಯ ಆವರಣದಲ್ಲಿ ಭಕ್ತರ ದೊಡ್ಡ ಜನಸಂದಣಿ ಕಂಡುಬಂತು. ಭಕ್ತರು ಕೆಂಡದ ಮೇಲೆ ನಡಿದು ತಾಯಿ ಕೃಪೆಗಾಗಿ ಪ್ರಾರ್ಥನೆ ಸಲ್ಲಿಸಿದರು. ಧಾರ್ಮಿಕ ಭಾವನೆ, ನಂಬಿಕೆ ಮತ್ತು ಪರಂಪರೆಯ ಸಂಯೋಜನೆಯ ಈ ವೈಭವಶಾಲಿ ಕೊಂಡೋತ್ಸವವನ್ನು ನೋಡುವ ಸಲುವಾಗಿ ಸಾವಿರಾರು ಭಕ್ತರು ಹಾಸನಾಂಬೆ ದೇವಾಲಯ ಬಳಿಗೆ ಆಗಮಿಸಿದ್ದರು. ಪೊಲೀಸ್ ಇಲಾಖೆ ಹಾಗೂ ಆಡಳಿತದಿಂದ ಬಿಗಿ ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿತ್ತು.

### ದಾಖಲೆ ಬರೆದ ಹಾಸನಾಂಬ

ಈ ಸಾಲಿನ ಹಾಸನಾಂಬೆ ದರ್ಶನ ವಿದ್ಯುಕ್ತವಾಗಿ ಮುಕ್ತಾಯವಾಗಿದ್ದು, ದಾಖಲೆ ಪ್ರಮಾಣದಲ್ಲಿ ಭಕ್ತರು ದರ್ಶನ ಪಡೆದಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಬಾರಿ 26.13 ಲಕ್ಷ ಜನರು ದರ್ಶನ ಪಡೆದಿದ್ದಾರೆ. ಟಿಕೆಟ್ ಮತ್ತು ಲಾಡು ಪ್ರಸಾದ ಮಾರಾಟದಿಂದ 21.82 ಕೋಟಿ



ರೂ. ಆದಾಯ ಬಂದಿದೆ. ಹುಂಡಿ ಎಣಿಕೆ ನಂತರ ಒಟ್ಟಾರೆ 25 ಕೋಟಿ ರೂ. ದಾಟಲಿದೆ ಎಂದು ವಿವರಿಸಿದರು. ಹುಂಡಿಕೆ ಎಣಿಕೆ ಶುಕ್ರವಾರ ನಡೆಯಲಿದೆ. ಕಳೆದ ವರ್ಷ 17.47 ಲಕ್ಷ ಭಕ್ತರು ದೇವಿ ದರ್ಶನ ಪಡೆದಿದ್ದರು. ಟಿಕೆಟ್ ಮತ್ತು



ಲಾಡು ಪ್ರಸಾದ ಮಾರಾಟದಿಂದ 9.68 ಕೋಟಿ ರೂ. ಆದಾಯ ಬಂದಿತ್ತು ಎಂದರು. ಈ ಬಾರಿ ಹಾಸನಾಂಬೆ ದರ್ಶನ ಅತ್ಯಂತ ಯಶಸ್ವಿಯಾಗಿದ್ದು, ಅದಕ್ಕೆ ಸಹಕಾರ ನೀಡಿದ ಸಂಸದರು, ಶಾಸಕರು, ಮಾಜಿ ಶಾಸಕರು, ಜಿಲ್ಲಾಡಳಿತದ ಎಲ್ಲ ಇಲಾಖೆಯ ಅಧಿಕಾರಿಗಳಿಗೆ ಧನ್ಯವಾದ ಹೇಳಿದರು. ಕಂದಾಯ, ಪೊಲೀಸ್ ಸೇರಿ ಎಲ್ಲ ಇಲಾಖೆಯವರು ಶ್ರಮವಹಿಸಿ ಕೆಲಸ ಮಾಡಿದ್ದಾರೆ ಎಂದರು. ಈ ಸಲ ಜನಸಾಮಾನ್ಯರು ಸಂತೋಷದಿಂದ ದರ್ಶನ ಪಡೆದಿದ್ದಾರೆ. ಅದು ನಮಗೂ ಸಂತೋಷ. ನೂಕು ನುಗ್ಗಲು ಇಲ್ಲದೆ ಸರಳ, ಸುಲಲಿತ ದರ್ಶನ ಆಗಿರುವುದು ಅತೀವ ಸಂತಸ ತಂದುಕೊಟ್ಟಿದೆ ಎಂದರು. ಇದರಿಂದ ಹಾಸನದ ಕೀರ್ತಿ ಪ್ರಜ್ವಲಿಸಿದೆ, ಹಾಸನ ಜನಗಳಿಗೆ ಗೌರವ ಬಂದಿದೆ ಎಂದರು.

ಶಾಸಕ ಶಿವಲಿಂಗೇಗೌಡ ಮಾತನಾಡಿ, ಕೃಷ್ಣ ಬೈರೇಗೌಡ ಅವರು ಹಾಸನಾಂಬ ಉತ್ಸವವನ್ನು ಯಶಸ್ವಿಯಾಗಿ ನಡೆಸುವ ಮೂಲಕ ತಾವೊಮ್ಮ ಉತ್ತಮ ಆಡಳಿತಗಾರ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದ್ದಾರೆ ಎಂದು ಕೊಂಡಾಡಿದರು.

ಜಿಲ್ಲಾಡಳಿತ ಹಾಗೂ ಜಿಲ್ಲೆಯ ಜನರ ಪರವಾಗಿ ಸಚಿವರಿಗೆ ಧನ್ಯವಾದ ಹೇಳಿದರು. ಸಂಸದರಾದ ಶ್ರೇಯಸ್ ಪಟೇಲ್, ಹೊಸದಾಗಿ ಬಂದರೂ ಡಿಸಿ ಅವರು ಹಗಲು ರಾತ್ರಿ ಶ್ರಮಿಸಿದ್ದಾರೆ ಎಂದು ಗುಣಗಾನ ಮಾಡಿದರು.

# ವರುಣಾರ್ಭಟಕ್ಕೆ ಕೊಚ್ಚಿ ಹೋದ ರಸ್ತೆ-ಸಂಪರ್ಕ ಕಡಿತ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಧಾರಾಕಾರ ಮಳೆಗೆ ಜಿಲ್ಲೆಯಲ್ಲಿ ಜನಜೀವನ ಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದೆ. ಬುಧವಾರ ಸಂಜೆ 7 ರಿಂದ ಮಧ್ಯರಾತ್ರಿ 1ರ ವರೆಗೆ ಎಡೆಬಿಡದೆ ಮಳೆ ಸುರಿಯಿತು. ಹಾಸನಮರ್ಕುಲಿ ಮಾರ್ಗದ ಕೌಶಿಕ ಕೆರೆ ಕೋಡಿ ಒಡೆದು ರಸ್ತೆ ಸಂಪೂರ್ಣ ಕೊಚ್ಚಿ ಹೋಗಿದೆ. ಸಾವಂತನಹಳ್ಳಿಯ ಶ್ರೀರಾಮದೇವರ ಕಟ್ಟೆ ಒಡೆದು ಹೊಲಗಳಿಗೆ ನೀರು ನುಗ್ಗಿರುವುದರಿಂದ ಬೆಳೆ ನಷ್ಟವುಂಟಾಗಿದೆ. ಹಿಂಗಾರು ಮಳೆಯಿಂದ ರಾಗಿ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಮರ್ಕನಹಳ್ಳಿ, ಗುಡುಗನಹಳ್ಳಿ, ಸಾವಂತನಹಳ್ಳಿ, ಚಿಗಳ್ಳಿ ವ್ಯಾಪ್ತಿಯಲ್ಲಿ ಕೆರೆಕಟ್ಟೆಗಳು ಭರ್ತಿಯಾಗಿ ಹಲವು ಸಂಪರ್ಕ ರಸ್ತೆಗಳು ಜಲಾವೃತವಾಗಿವೆ. ಅಲ್ಲಲ್ಲಿ ವಿದ್ಯುತ್ ಕಂಬಗಳು ಬಿದ್ದಿರುವುದರಿಂದ ರಾತ್ರಿಪೂರ್ತಿ ಕತ್ತಲಲ್ಲೇ ಕಳೆಯುವಂತಾಯಿತು. ವಿಷಯ ತಿಳಿದು ಸಂಸದ ಶ್ರೇಯಸ್ ಪಟೇಲ್ ಅವರು ಕೌಶಿಕ ಕೆರೆಗೆ ಭೇಟಿ ನೀಡಿ ಪರಿಶೀಲಿಸಿದರು. ಸಾರ್ವಜನಿಕ ಸಂಚಾರಕ್ಕೆ ತೊಂದರೆಯಾಗದಂತೆ ಶೀಘ್ರ ಕ್ರಮ ಕೈಗೊಳ್ಳಬೇಕೆಂದು ಅಧಿಕಾರಿಗಳಿಗೆ ಸೂಚಿಸಿದರು.

ಏಕಾಏಕಿ ಕುಸಿದ ಮನೆ: ಹೊಳೆನರಸೀಪುರ ತಾಲ್ಲೂಕು ಹಳ್ಳಿಮೈಸೂರು ಹೋಬಳಿ ನೇರಳೆ ಗ್ರಾಮದಲ್ಲಿ ಶಿವಶಂಕರ್ ಎಂಬುವರಿಗೆ ಸೇರಿದ ವಾಸದ ಮನೆ ಮಳೆಯಿಂದ ಕುಸಿದಿದೆ. ಬುಧವಾರ ರಾತ್ರಿ ಕುಟುಂಬ ಸದಸ್ಯರೆಲ್ಲರೂ ಕೊಠಡಿಯಲ್ಲಿ ಮಲಗಿದ್ದರು.



ಗೋಡೆ ಕುಸಿಯುವ ಶಬ್ದ ಕೇಳುತ್ತಿದ್ದಂತೆ ತಕ್ಷಣವೇ ಹೊರಗೆ ಓಡಿ ಬಂದಿದ್ದಾರೆ. ಮನೆಯಲ್ಲಿದ್ದ ವಸ್ತುಗಳು, ದವಸ ಧಾನ್ಯಗಳು ಮಣ್ಣು ಪಾಲಾಗಿವೆ. ಆಶ್ರಯಕ್ಕೆ ಇದ್ದ ಮನೆ ಧರೆಗುರುಳಿರುವುದರಿಂದ ಕುಟುಂಬ ಬೀದಿಗೆ ಬರುವಂತಾಗಿದೆ.

ಹೇಮಾವತಿ ಜಲಾನಯನ ಪ್ರದೇಶದಲ್ಲಿ ಉತ್ತಮ ಮಳೆ ಸುರಿಯುತ್ತಿದ್ದು ವರುಣನ ಆರ್ಭಟ ಮುಂದುವರಿಯುವ ಸಾಧ್ಯತೆಯಿದೆ. 2922 ಅಡಿ ಸಾಮರ್ಥ್ಯದ ಹೇಮಾವತಿ ಜಲಾಶಯದಲ್ಲಿ ಪ್ರಸ್ತುತ 2921.50 ಅಡಿ ನೀರಿದೆ. 37.103 ಟಿಎಂಸಿ ಸಂಗ್ರಹ ಸಾಮರ್ಥ್ಯದ ಅಣೆಕಟ್ಟೆ ಇದಾಗಿದ್ದು ಈಗ 36.620 ಟಿಎಂಸಿ ನೀರು ಸಂಗ್ರಹವಾಗಿದೆ. 16394 ಕ್ಯೂಸೆಕ್ ಒಳ ಹರಿವಿದ್ದು, 4600 ಹೊರ ಹರಿವು ಇದೆ. ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದುಬರುವ ಸಾಧ್ಯತೆ ಇರುವುದರಿಂದ ಯಾವ ಸಮಯದಲ್ಲಾದರೂ ನದಿಗೆ ನೀರು ಬಿಡಬಹುದು. ಹೇಮಾವತಿ ನದಿ ಪಾತ್ರ, ನದಿ ದಂಡೆ ಮತ್ತು ಅಕ್ಕಪಕ್ಕದಲ್ಲಿ ವಾಸಿಸುವ ಗ್ರಾಮಸ್ಥರು ಸುರಕ್ಷಿತ ಸ್ಥಳಗಳಿಗೆ ತೆರಳಬೇಕೆಂದು ಹೇಮಾವತಿ ಯೋಜನಾ ವೃತ್ತ ಸೂಪರಿಂಟೆಂಡಿಂಗ್ ಇಂಜಿನಿಯರ್ ಜಿ.ಕೆ.ಜ್ಯೋತಿ ಅವರು ಕೋರಿದ್ದಾರೆ. ಗುರುವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಯಲ್ಲಿ ಜಿಲ್ಲೆಯ ಎಲ್ಲಾ ಹೋಬಳಿಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗಿದೆ. ಹೆತ್ತೂರು 78.6 ಮಿ.ಮೀ, ಹಾನುಬಾಳು 72.9 ಮಿ.ಮೀ. ಮತ್ತು ಯಸಳೂರು, ಕೊಣನೂರಿನಲ್ಲಿ ತಲಾ 70.7 ಮಿ.ಮೀ. ಮಳೆಯಾದ ವರದಿಯಾಗಿದೆ.

### ಮನೆಗಳಿಗೆ ನುಗ್ಗಿದ ನೀರು

ಹಾಸನದ ಒಂಬತ್ತನೇ ವಾರ್ಡ್‌ನ ರವೀಂದ್ರ ನಗರದಲ್ಲಿ ಮಳೆ ನೀರು ಮನೆಗೆ ನುಗ್ಗಿ ರಾತ್ರಿಯಿಡೀ ನೀರು ಹೊರ ಹಾಕಲು ಹರಸಾಹಸಪಡುವಂತಾಯಿತು. ಅದೇ ರೀತಿ ಇಳಿಜಾರು ಪ್ರದೇಶವಾದ ರಂಗೋಲಿ ಹಳ್ಳದ ಬಹುತೇಕ ಮನೆಗಳಿಗೆ ನೀರು ನುಗ್ಗಿ ಜನರು ತೊಂದರೆ ಅನುಭವಿಸಿದರು.

# ಐಕನಹಳ್ಳಿ ಗ್ರಾಪಂಗೆ ಕವಿತಾ ರವಿ ಉಪಾಧ್ಯಕ್ಷೆ

ಚನ್ನರಾಯಪಟ್ಟಣ: ತಾಲ್ಲೂಕಿನ ಗಡಿಭಾಗವಾದ ಐಕನಹಳ್ಳಿ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರಾಗಿ ಕವಿತಾ ರವಿ ಅವಿರೋಧ ಆಯ್ಕೆಯಾದರು.

ಐಕನಹಳ್ಳಿ ಗ್ರಾಮ ಪಂಚಾಯಿತಿ ನಿಕಟ ಪೂರ್ವ ಉಪಾಧ್ಯಕ್ಷ ವಿರಾಜು ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಪ್ರಕ್ರಿಯೆ ನಡೆಯಿತು. ಚುನಾವಣೆಯಲ್ಲಿ ಸಾಸಲು ಗ್ರಾಮದ ಸದಸ್ಯೆ ಕವಿತಾ ರವಿ ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಕವಿತಾ ರವಿ ಅವರು ಉಪಾಧ್ಯಕ್ಷರಾಗಿ ಆಯ್ಕೆಗೊಂಡಿದ್ದಾರೆಂದು ಚುನಾವಣಾ ಅಧಿಕಾರಿ ಘೋಷಣೆ ಮಾಡಿದರು.

ನೂತನ ಉಪಾಧ್ಯಕ್ಷರನ್ನು ಕರ್ನಾಟಕ ಸಹಕಾರ ಮಾರಾಟ ಮಂಡಳಿಯ ನಿರ್ದೇಶಕ ಹಾಗೂ ಮಾಜಿ ಜಿಲ್ಲಾ ಪಂಚಾಯಿತಿ ಸದಸ್ಯ ಸಿ.ಎನ್. ಪುಟ್ಟಸ್ವಾಮಿಗೌಡ ಅಭಿನಂದಿಸಿದರು. ಈ



ವೇಳೆ ಮಾತನಾಡಿ, ಕವಿತಾ ರವಿ ಅವರು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಗ್ರಾಮಗಳ ಅಭಿವೃದ್ಧಿಗೆ ಶ್ರಮಿಸಲಿ ಎಂದು ಸಲಹೆ ನೀಡಿದರು. ಕಳೆದ ಎರಡು ತಿಂಗಳ ಹಿಂದೆ ನೂತನ ಅಧ್ಯಕ್ಷರಾಗಿ ಸುಮಿತ್ರ ಶಂಭುಲಿಂಗಯ್ಯ ಆಯ್ಕೆಗೊಂಡಿದ್ದರು. ಈ ದಿನ ನೂತನ ಉಪಾಧ್ಯಕ್ಷರನ್ನು ಎಲ್ಲರೂ ಒಗ್ಗಟ್ಟಿನಿಂದ ಆಯ್ಕೆ ಮಾಡಿರುವುದು ತುಂಬಾ ಸಂತೋಷದ ವಿಚಾರ ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಐನೋರಹಳ್ಳಿ ಮಲ್ಲೇಶ್, ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆಯ ಮಾಜಿ ಉಪಾಧ್ಯಕ್ಷ ಐ.ಡಿ. ಉದಯಶಂಕರ್, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ಕೃಷ್ಣೇಗೌಡ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸುಮಿತ್ರ ಶಂಭುಲಿಂಗಯ್ಯ, ಮಾಜಿ ಅಧ್ಯಕ್ಷೆ ಅಂಬುಜ ಉದಯಶಂಕರ್, ಐ. ಡಿ. ಕುಮಾರ್, ಮಾಜಿ ಉಪಾಧ್ಯಕ್ಷ ಈರಾಜು, ಎಲ್‌ಐಸಿ ಅಶೋಕ್, ನಾಗಮಣಿ ಶಿವಣ್ಣ, ಭಾಗ್ಯಮ್ಮ, ಐಕನಹಳ್ಳಿ ಗ್ರಾಮ ಪಂಚಾಯಿತಿ ಬಿಲ್ ಕಲೆಕ್ಟರ್ ನಂಜುಂಡ ಸೇರಿದಂತೆ ಇತರರು ಹಾಜರಿದ್ದರು.


# ಧಾರಾಕಾರ ಮಳೆಗೆ ಉಕ್ಕಿ ಹರಿದ ಕೊಳವೆ ಬಾವಿಗಳು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ತಾಲ್ಲೂಕಿನಾದ್ಯಂತ ಒಂದು ವಾರದಿಂದ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದು ಕೆರೆ ಕಟ್ಟೆಗಳು ತುಂಬಿ ಹರಿಯುತ್ತಿರುವುದರ ಜೊತೆಗೆ ಕೊಳವೆ ಬಾವಿಗಳಲ್ಲಿ ಕೇಸಿಂಗ್ ಮೇಲ್ಭಾಗದಿಂದ ನೀರು ಉಕ್ಕಿ ಹರಿಯುತ್ತಿದೆ.

ತಾಲ್ಲೂಕು ವ್ಯಾಪ್ತಿಯಲ್ಲಿ ಪ್ರತಿದಿನ ಬಿಡುವಿಲ್ಲದೆ ಮಳೆ ಸುರಿಯುತ್ತಿದೆ. ಹಳ್ಳ ಕೊಳ್ಳಗಳ ಮೂಲಕ ಮಳೆ ನೀರು ಹರಿಯುತ್ತಿದ್ದು ಬಹುತೇಕ ಕೆರೆ ಕಟ್ಟೆಗಳು ತುಂಬಿ ಕೋಡಿ ಬಿದ್ದಿವೆ. ತೆಂಗು ಹಾಗೂ ಕೃಷಿ ಜಮೀನು ಜಲಾವೃತಗೊಂಡಿವೆ. ಅಲ್ಲದೆ ತಗ್ಗು ಪ್ರದೇಶಗಳಲ್ಲಿ ಜೌಗು ಕಾಣಿಸಿಕೊಂಡಿದೆ. ಬಹುತೇಕ ಕೃಷಿ ಜಮೀನಿಗೆ ತೆರಳುವ ಬಂಡಿ ಅಥವಾ ಕಾಲು ದಾರಿಗಳು ಸಹ ನೀರಿನಿಂದ ಮುಚ್ಚಿವೆ.

ಹಲವು ವರ್ಷಗಳಿಂದ ತಾಲ್ಲೂಕು ವ್ಯಾಪ್ತಿಯಲ್ಲಿ ವಾಡಿಕೆ ಮಳೆಯಾಗದೆ ಕೆರೆ ಕಟ್ಟೆಗಳು ನೀರಿಲ್ಲದೆ ಬತ್ತಿದ್ದವು. ಗಿಡ ಗಂಟಿಗಳು ಬೆಳೆದು ಕಾಡು ಪ್ರದೇಶದಂತಾಗಿದ್ದು ಚಿರತೆ ಹಾಗೂ ಕಾಡು ಹಂದಿಗಳು ಸೇರಿ ವನ್ಯಪ್ರಾಣಿಗಳ ವಾಸ ತಾಣವಾಗಿದ್ದವು. ಆದರೆ ಈ ಬಾರಿ ವ್ಯಾಪಕವಾಗಿ ಸುರಿದ ಮಳೆಯಿಂದ ಕೆರೆ ಕಟ್ಟೆಗಳು ತುಂಬಿ ಹರಿಯುತ್ತಿವೆ. ಅದರಿಂದ ಸಾಕಷ್ಟು ಪ್ರಮಾಣದಲ್ಲಿ ಅಂತರ್ಜಲ ಚೇತರಿಕೆ



ಕಂಡಿದೆ ಎಂದು ರೈತ ಸಂಘದ ಅಧ್ಯಕ್ಷ ಅರಳಾಪುರ ಮಂಜೇಗೌಡ ತಿಳಿಸಿದರು. 15-20 ವರ್ಷಗಳಿಂದ ವಾಡಿಕೆಯಂತೆ ಮಳೆಯಾಗದೆ ಚನ್ನರಾಯಪಟ್ಟಣ ತಾಲ್ಲೂಕು ಬರಪೀಡಿತ ಪ್ರದೇಶವಾಗಿತ್ತು. ಹಿರೀಸಾವೆ-ಜುಟ್ಟನಹಳ್ಳಿ, ನವಿಲೆ, ನುಗ್ಗೇಹಳ್ಳಿ, ಬಾಗೂರು ಹಾಗೂ ಕಲ್ಲೇಸೋಮನಹಳ್ಳಿ ಏತ ನೀರಾವರಿ ಯೋಜನೆಯಡಿ ತಾಲ್ಲೂಕು ವ್ಯಾಪ್ತಿಯ ನೂರಾರು ಕೆರೆಕಟ್ಟೆಗಳು ತುಂಬಿದ್ದು ವ್ಯಾಪ್ತಿಯಲ್ಲಿ ಅಂತರ್ಜಲ ಚೇತರಿಕೆ ಕಂಡಿತ್ತು. ಆದರೆ ತೋಟಿಕೆರೆ, ದಿಡಗ ವ್ಯಾಪ್ತಿ ಸೇರಿ ಏತನೀರಾವರಿ ಯೋಜನೆಯ ವ್ಯವಸ್ಥೆ ಇಲ್ಲದ ನೂರಾರು ಕೆರೆಗಳು ನೀರಿಲ್ಲದೆ ಬರಡಾಗಿದ್ದವು. ಜನ ಜಾನುವಾರುಗಳು ನೀರಿಗಾಗಿ ಪರಿತಪಿಸಬೇಕಾಗಿತ್ತು. ಅಂತರ್ಜಲ ಇಳಿಮುಖಗೊಂಡಿದ್ದು ಕೊಳವೆ ಬಾವಿಗಳು ಬತ್ತಿ ಬರಿದಾಗಿದ್ದವು.

ಈ ಬಾರಿಯೂ ಪೂರ್ವ ಮುಂಗಾರಿನಿಂದಲೂ ವಾಡಿಕೆಯಂತೆ ಮಳೆಯಾಗಿರಲಿಲ್ಲ. ಕಳೆದ ವಾರದಿಂದ ಧಾರಾಕಾರವಾಗಿ ಮಳೆ ಸುರಿಯುತ್ತಿದ್ದು ಬತ್ತಿ ಬರಿದಾಗಿದ್ದ ಕೆರೆಗಳು ಸಹ ನೀರು ಕಂಡಿವೆ. ಬಹುತೇಕ ಕೆರೆಕಟ್ಟೆಗಳು ತುಂಬಿ ಕೋಡಿ ಬೀಳುವ ಹಂತದಲ್ಲಿವೆ.

ಇದೇ ರೀತಿ ಕಳೆದ ನಾಲ್ಕು ವರ್ಷಗಳ ಹಿಂದೆ ವ್ಯಾಪ್ತಿಯಲ್ಲಿ ಧಾರಾಕಾರ ಮಳೆಯಾಗಿದ್ದು ಬಾಳಗಂಚಿ, ದಿಡಗ ಸೇರಿ ಬಹುತೇಕ ಕೆರೆಕಟ್ಟೆಗಳು ಎರಡು ಮೂರು ಬಾರಿ ಕೋಡಿ ಬಿದ್ದಿದ್ದವು. ನಂತರದ ವರ್ಷಗಳಲ್ಲಿ ವಾಡಿಕೆಯಂತೆ ಮಳೆಯಾಗದ ಕಾರಣ ಮತ್ತೆ ಬರ ಮುಂದುವರಿದಿತ್ತು. ಈ ವರ್ಷ ಮಳೆರಾಯ ಕಣ್ತೆರೆದಿದ್ದು ತಂಪೆರೆಯುತ್ತಿದ್ದಾನೆ.

ತಗ್ಗು ಪ್ರದೇಶಗಳಲ್ಲಿ ಜೌಗು ಹರಿಯುತ್ತಿದ್ದು ತಾಲ್ಲೂಕಿನ ಎಂ.ಕೆ.ಹೊಸೂರು, ಚಿಕ್ಕೇನಹಳ್ಳಿ, ಅಣತಿ ಸೇರಿ ವಿವಿಧ ಗ್ರಾಮಗಳಲ್ಲಿ ಹಲವು ವರ್ಷಗಳಿಂದ ಬತ್ತಿ ಬರಿದಾಗಿದ್ದ ಕೊಳವೆ ಬಾವಿಗಳಲ್ಲಿ ಕೇಸಿಂಗ್ ಪೈಪ್ ಮೇಲಿನಿಂದ ನೀರು ಉಕ್ಕಿ ಹರಿಯುತ್ತಿದ್ದು ರೈತರಲ್ಲಿ ಆಶ್ಚರ್ಯದ ಜೊತೆಗೆ ಸಂತಸ ಮೂಡಿಸಿದೆ. ಚಿಕ್ಕೇನಹಳ್ಳಿ ಗ್ರಾಮದ ಕೊಳವೆ ಬಾವಿಯೊಂದರಲ್ಲಿ ನೀರು ಚಿಮ್ಮುತ್ತಿದೆ.

ಹವಾಮಾನ ಇಲಾಖೆ ನೀಡಿರುವ ಮುನ್ಸೂಚನೆ ಪ್ರಕಾರ ಇನ್ನೂ 6 ರಿಂದ 7 ದಿನಗಳು ಮಳೆಯಾಗುವ ಸಾಧ್ಯತೆ ಇದ್ದು ಕೆರೆಕಟ್ಟೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದುಬರುವ ನಿರೀಕ್ಷೆಯಿದೆ ಎಂದು ರೈತ ಮುಖಂಡ ಕರಿಕ್ಯಾತನಹಳ್ಳಿ ತುಳಸಿರಾಜ್ ಹೇಳಿದರು.

# ಜೆಜೆಎಂ ಕಾಮಗಾರಿಯಿಂದ ಎಲ್ಲ ಮನೆಗೂ ನೀರು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಆಲೂರು: ಪ್ರತಿ ಮನೆಗೆ ಶುದ್ಧ ಕುಡಿಯುವ ನೀರು ಕಲ್ಪಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಮನೆ ಮನೆಗೆ ಗಂಗೆ ಪೂರೈಕೆ ಯೋಜನೆಯನ್ನು (ಜಲ ಜೀವನ್ ಮಿಷನ್) ಜಾರಿಗೆ ತಂದಿದೆ ಎಂದು ಶಾಸಕ ಸಿಮೆಂಟ್ ಮಂಜು ಹೇಳಿದರು.

ತಾಲ್ಲೂಕಿನ ಮಗ್ಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ನವಿಲಹಳ್ಳಿ, ನಿಡಗರಹಳ್ಳಿ ಹಾಗೂ ಹಾರೋಹಳ್ಳಿ ಗ್ರಾಮಗಳಿಗೆ 75 ಲಕ್ಷ ರೂ. ವೆಚ್ಚದ ಕುಡಿಯುವ ನೀರಿನ ಪೈಪ್‌ಲೈನ್ ನಿರ್ಮಾಣ ಕಾಮಗಾರಿಗೆ ಗುರುವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಜಲ ಜೀವನ್ ಮಿಷನ್ ಯೋಜನೆಯಡಿ ಮನೆ ಮನೆಗೆ ಶುದ್ಧ ಹಾಗು ಸಮರ್ಪಕ



ಕುಡಿಯುವ ನೀರು ಸರಬರಾಜು ಮಾಡುವ ಯೋಜನೆ ಚಾಲ್ತಿಯಲ್ಲಿದೆ. ಬೇಸಿಗೆಯಲ್ಲಿ ನೀರಿನ ಸಮಸ್ಯೆ ಎದುರಿಸುವ ಊರುಗಳಿಗೆ ಬಹುಗ್ರಾಮ ಕುಡಿಯುವ ನೀರು ಯೋಜನೆಯಡಿ ನೀರಿನ ಸಂಪರ್ಕ ಕಲ್ಪಿಸಲಾಗುತ್ತಿದೆ. ನೀರು ಸರಬರಾಜಿನಲ್ಲಿ ಸಮಸ್ಯೆ ಇದ್ದರೆ ತಕ್ಷಣ ನನ್ನ ಗಮನಕ್ಕೆ ತರಬೇಕು. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಈ ಬಗ್ಗೆ ನಿಗಾ ವಹಿಸಬೇಕು. ಜನರಿಂದ ದೂರು ಬರದಂತೆ ಎಚ್ಚರ ವಹಿಸಬೇಕೆಂದರು.

ಮುಂಬರುವ ದಿನಗಳಲ್ಲಿ ಪ್ರತಿ ಮನೆಗೆ ಶುದ್ಧ ಕುಡಿಯುವ ನೀರೊದಗಿಸುವ ಜೊತೆಗೆ ಜಲ ಮೂಲಗಳನ್ನು ಕಾಪಾಡಿ ಮುಂದಿನ ಪೀಳಿಗೆಗೆ ನೀರು ಉಳಿಸುವುದು ಮತ್ತು ನೀರಿನ ಮಹತ್ವವನ್ನು ತಿಳಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆಯೆಂದರು.

ಜೆಜೆಎಂ ಕಾಮಗಾರಿ ವೇಳೆ ರಸ್ತೆಗಳನ್ನು ಅಗೆದು ಹಾಳು ಮಾಡುತ್ತಿರುವ ಬಗ್ಗೆ ದೂರುಗಳಿದ್ದು, ಅಗೆದ ರಸ್ತೆಯ ಗುಂಡಿಗಳನ್ನು ಮುಚ್ಚಿ ಯಥಾಸ್ಥಿತಿ ಕಾಪಾಡಬೇಕು. ಈ ಕುರಿತು ಅಧಿಕಾರಿಗಳು ಗಮನ ಹರಿಸುವಂತೆ ಸೂಚಿಸಿದರು.

ಗ್ರಾಮ ಪಂಚಾಯಿತಿ ಸದಸ್ಯರಾದ ಜಯಮ್ಮ, ದೇವರಾಜ್, ಹರೀಶ್, ಯೋಗೇಶ್, ಪೂವಯ್ಯ, ವಾಸುದೇವ್, ಮಹೇಂದ್ರ, ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ಇಲಾಖೆ ಇಂಜಿನಿಯರ್ ಕಾವ್ಯ, ಪಿಡಿಒ ಪರಮೇಶ್ ಇತರರಿದ್ದರು.

# ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಬೇಲೂರು ಹಾಗೂ ಹಾಸನ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಕಾರು ಅಪಘಾತವಾಗಿ ಬೈಕ್ ಸವಾರ ಮೃತಪಟ್ಟಿರುವ ಘಟನೆ ಬೇಲೂರು-ಗೆಂಡೇಹಳ್ಳಿ ರಸ್ತೆಯ ಗೋರಿಮಠ ಪಲ್ವರ್ ಮಷಿನ್ ಬಳಿ ನಡೆದಿದೆ. ಬೇಲೂರು ತಾಲ್ಲೂಕು ಅದುಮನಹಳ್ಳಿ ಗ್ರಾಮದ ರಾಜೇಗೌಡ (50) ಮೃತರು. ದೇವಲಾಪುರ ಹತ್ತಿರ ಚಿಲ್ಲರೆ ಅಂಗಡಿ ನಡೆಸುತ್ತಿದ್ದ ರಾಜೇಗೌಡ ಅ. 22ರ ರಾತ್ರಿ 9ರ ಸಮಯದಲ್ಲಿ ಅಂಗಡಿ ಬಾಗಿಲು ಹಾಕಿ ಮನೆಗೆ ಹೋಗುತ್ತಿದ್ದಾಗ ಎದುರುಗಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿಯಾಗಿದೆ. ತಲೆ ಹಾಗೂ ಎದೆಭಾಗಕ್ಕೆ ಬಲವಾದ ಏಟು ಬಿದ್ದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮತ್ತೊಂದು ಪ್ರಕರಣದಲ್ಲಿ ಬೈಕ್‌ಗಳ ನಡುವೆ ಸಂಭವಿಸಿದ ಮುಖಾಮುಖಿ ಡಿಕ್ಕಿಯಲ್ಲಿ ವ್ಯಕ್ತಿ ಮೃತಪಟ್ಟಿರುವ ಘಟನೆ ಹಾಸನ ತಾಲ್ಲೂಕಿನ ಪಿರುಮೆನಹಳ್ಳಿಯಲ್ಲಿ ನಡೆದಿದೆ. ತುಮಕೂರು ಜಿಲ್ಲೆ ಅರೇಹಳ್ಳಿ ಗ್ರಾಮದ ಪುಟ್ಟರಾಜು (55) ಮೃತರು. ಹಾಸನದಲ್ಲಿ ಕೃಷಿ ಕೆಲಸ ಮಾಡಿಕೊಂಡಿದ್ದ ಅವರು ಡೈರಿಗೆ ಹಾಲು ಹಾಕಲೆಂದು ಪಿರುಮೆನಹಳ್ಳಿಗೆ ಬರುತ್ತಿದ್ದಾಗ ಹಿಂದಿನಿಂದ ವೇಗವಾಗಿ ಬಂದ ಮತ್ತೊಂದು ಬೈಕ್ ಡಿಕ್ಕಿಯಾಗಿದೆ. ಗಂಭೀರ ಗಾಯವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಕುರುಕ್ಷೇತ್ರ ನಾಟಕ ಪ್ರದರ್ಶಿಸಲಿದ್ದಾರೆ ಶಾಲಾ ಮಕ್ಕಳು

## ನಾಲ್ಕು ತಿಂಗಳ ನಿರಂತರ ತಾಲೀಮು | ನ.23ಕ್ಕೆ ತೆರೆ ಮೇಲೆ ಪ್ರದರ್ಶನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಚನ್ನರಾಯಪಟ್ಟಣ: ಅತಿಹೆಚ್ಚು ಪೌರಣಿಕ ಕಲಾವಿದರನ್ನು ಹೊಂದಿರುವ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಮಕ್ಕಳು ವಿಶೇಷ ಪ್ರಯತ್ನವೊಂದಕ್ಕೆ ಸಾಕ್ಷಿಯಾಗಲಿದ್ದಾರೆ.

ನ. 23 ರಂದು ಪಟ್ಟಣದಲ್ಲಿ ಮಕ್ಕಳಿಂದಲೇ ಪೌರಾಣಿಕ ನಾಟಕ ಪ್ರದರ್ಶನಗೊಳ್ಳುತ್ತಿದೆ. ಇದಕ್ಕಾಗಿ ಮಕ್ಕಳು ಪಟ್ಟಣದ ಬಾಗೂರು ರಸ್ತೆಯಲ್ಲಿನ ಮಹಾಭುಜ ಮಾರುತಿ ಇಂಡಿಯನ್ ಸೇವಾ ಟ್ರಸ್ಟ್‌ನ ಕಚೇರಿಯಲ್ಲಿ ನಿರಂತರ ತಾಲೀಮು ನಡೆಸುತ್ತಿದ್ದಾರೆ. ಮಕ್ಕಳ ಕಲಾಪ್ರದರ್ಶನಕ್ಕೆ ಸಾರ್ವಜನಿಕರು ಮೆಚ್ಚುಗೆ ಸೂಚಿಸಿದ್ದಾರೆ.

ಪಟ್ಟಣದ ಬಾಗೂರು ರಸ್ತೆಯಲ್ಲಿನ ನ್ಯೂ ಮಾರುತಿ ಎಲೆಕ್ಟ್ರಾನಿಕ್ ಲ್ಯಾಂಡ್‌ನ ಮಾಲೀಕ ಕೆ.ಎಚ್. ರಾಜೇಶ್ ಅವರು ತಮ್ಮ ಶ್ರೀ ಮಾಜಭುಜ ಮಾರುತಿ ಇಂಡಿಯನ್ ಸೇವಾ ಟ್ರಸ್ಟ್‌ನಡಿ ಮಕ್ಕಳಿಗೆ ಕುರುಕ್ಷೇತ್ರ ಪೌರಣಿಕ ನಾಟಕ ಕಲಿಸಲು ಮುಂದಾಗಿದ್ದಾರೆ. ಅದಕ್ಕಾಗಿ ತಮ್ಮ ಟ್ರಸ್ಟ್‌ನ ಕಚೇರಿಯಲ್ಲಿ ನಾಟಕದ ನಿರ್ದೇಶಕ ಪ್ರಜ್ವಲ್ ಜಗದೀಶ್ ಅವರ ಮಾರ್ಗದರ್ಶನದಲ್ಲಿ ಮಕ್ಕಳು ನಾಟಕದ ಅಭ್ಯಾಸದಲ್ಲಿ ತೊಡಗಿದ್ದಾರೆ. ಮಕ್ಕಳ ಕಲಿಕೆಗೆ ತೊಂದರೆಯಾಗದ ರೀತಿಯಲ್ಲಿ ರಜಾ ದಿನಗಳಲ್ಲಿ ಮಕ್ಕಳಿಗೆ ಅಭ್ಯಾಸ ನಡೆಸುವ ಕೆಲಸವಾಗುತ್ತಿದೆ. ಶನಿವಾರ ಮತ್ತು ಭಾನುವಾರ ದಿನಪೂರ್ತಿ ಅಭ್ಯಾಸವಿರುತ್ತದೆ. ಕಲಿಯುವ ವಯಸ್ಸು ಆಗಿರುವುದರಿಂದ ಮಕ್ಕಳು ನಾಲ್ಕು ತಿಂಗಳಲ್ಲಿಯೇ ನಾಟಕದ ಅಭ್ಯಾಸವನ್ನು ಪೂರ್ಣಗೊಳಸಿದ್ದಾರೆ. ದೀಪಾವಳಿ ಶುಭ ದಿನದಂದು ನಾಟಕದ ಎಲ್ಲ ಕಲಾವಿದ ಮಕ್ಕಳು ಗೆಜ್ಜೆಪೂಜೆ ನಡೆಸಿ ಸಾಮೂಹಿಕ ಪ್ರಾರ್ಥನೆಯೊಂದಿಗೆ ನಾಟಕದ ಪ್ರದರ್ಶನ ಮಾಡಿದರು. ದೊಡ್ಡವರು ನಾಟಕದ ಡೈಲಾಗ್‌ಗಳಿಗೆ ತಡಬಡಿಸುವ ಕಾಲದಲ್ಲಿ ಮಕ್ಕಳು ಸುಲಲಿತವಾಗಿ ನಾಟಕದ ಹಾಡು, ಡೈಲಾಗ್‌ಗಳ ಮೂಲಕ ಮನರಂಜಿಸಿದರು.

ಮಕ್ಕಳ ನಾಟಕಕ್ಕೆ ಕಾರಣಿಕರ್ತರಾದ ಮಾಜಭುಜ ಮಾರುತಿ ಇಂಡಿಯನ್ ಸೇವಾ ಟ್ರಸ್ಟ್‌ನ ಕಾರ್ಯದರ್ಶಿ ರಾಜೇಶ್ ಕೆಂಚನಹಳ್ಳಿ ಮಾತನಾಡಿ, ಜಿಲ್ಲೆಗೆ ವಿನೂತನ ಕಾರ್ಯಕ್ರಮವನ್ನು ನಮ್ಮ ಟ್ರಸ್ಟ್‌ನಡಿ ನೀಡಬೇಕು ಎಂಬ ಆಶಯದೊಂದಿಗೆ ಮಕ್ಕಳನ್ನೇ ಪ್ರಧಾನವಾಗಿರಿಸಿಕೊಂಡು ಕುರುಕ್ಷೇತ್ರ ನಾಟಕವನ್ನು ಕಲಿಸಲಾಗುತ್ತಿದೆ.

ಇದಕ್ಕಾಗಿ ಆಸಕ್ತಿ ಇರುವ, ಕಲೆ ಬಗ್ಗೆ ಜ್ಞಾನ ಇರುವ 30 ಮಕ್ಕಳನ್ನು ಆಯ್ಕೆ ಮಾಡಿಕೊಂಡು ನಾಟಕ ಕಲಿಸಲಾಗಿದೆ. ನ. 23 ರಂದು ಪಟ್ಟಣದಲ್ಲಿ ಪ್ರದರ್ಶನಗೊಳಲಿದೆ. ಮಕ್ಕಳ ಕಲಿಕೆಗೆ ತೊಂದರೆಯಾಗದಂತೆ ಪ್ರತಿ ಶನಿವಾರ ಮತ್ತು ಭಾನುವಾರವಷ್ಟೆ ನಾಟಕದ ಅಭ್ಯಾಸ ಕಾರ್ಯಮಾಡಿಕೊಂಡು ಬರಲಾಗಿದೆ. ಮಕ್ಕಳು ದೊಡ್ಡವರಿಗಿಂತ ಬೇಗ ಗ್ರಹಿಸುವ ಶಕ್ತಿ ಹೊಂದಿರುವ ಕಾರಣ ನಾಟಕದ ಡೈಲಾಗ್, ಅಭಿನಯವನ್ನು ಮನೋಜ್ಞವಾಗಿ ಮಾಡುತ್ತಿದ್ದಾರೆ. ಪೋಷಕರು ತಮ್ಮ ಮಕ್ಕಳೊಂದಿಗೆ ಆಗಮಿಸಿ ತಮ್ಮ ಮಕ್ಕಳ ಅಭಿನಯವನ್ನು ನೋಡಿ ಖುಷಿಪಡುತ್ತಿದ್ದಾರೆ ಎಂದರು.

ಪಟ್ಟಣದಲ್ಲಿ ಮಹಿಳೆಯರೇ ಸೇರಿ ಕುರಕ್ಷೇತ್ರ ನಾಟಕ ಪ್ರದರ್ಶಿಸಿ ಜನ ಮೆಚ್ಚುಗೆ ಗಳಿಸಿದ ಕಲಾವಿದರಾದ ದುರ್ಯೋಧನನ ಪಾತ್ರಧಾರಿ ನೇತ್ರಾ, ನವೀನ್ ಹಾಗೂ ಶ್ರೀ ಕೃಷ್ಣನ ಪಾತ್ರಧಾರಿ ಹೇಮಾ ಬಾಬು, ರವರು ಟ್ರಸ್ಟ್‌ನ ಕಚೇರಿಗೆ ಭೇಟಿ ನೀಡಿ ಮಕ್ಕಳ ಪ್ರದರ್ಶನ ನೋಡಿ ಮೆಚ್ಚುಗೆ ವ್ಯಕ್ತಪಡಿಸಿ ಪ್ರೋತ್ಸಾಹಿಸಿದರು.

### ಪಾತ್ರಧಾರಿಗಳು

ಮಕ್ಕಳ ಪೌರಾಣಿಕ ನಾಟಕದ ಪಾತ್ರಧಾರಿಗಳಾದ ಕೃಷ್ಣನ ಪಾತ್ರದಲ್ಲಿ ಕೆ.ಆರ್.ಧಣಿ, ದುರ್ಯೋಧನನ ಪಾತ್ರದಲ್ಲಿ ಧನುಷ್, ಅರ್ಜುನನಾಗಿ ಧ್ಯಾನ್ ಮಂಜುನಾಥ್, ಭೀಮನ ಪಾತ್ರದಲ್ಲಿ ದಿಶಾಂತ್, ಧರ್ಮರಾಯನ ಪಾತ್ರದಲ್ಲಿ ಹಿತೇಶ್, ರುಕ್ಮಿಣಿಯ ಪಾತ್ರದಲ್ಲಿ ಹನಿ, ವಿದುರನ ಪಾತ್ರದಲ್ಲಿ ಕುಶಾಲ್, ಭೀಷ್ಮನಾಗಿ ಶೌರ್ಯ, ಅಭಿಮನ್ಯು-ಮಧುವನ್, ಕರ್ಣ-ಉತ್ಕರ್ಷ, ಉತ್ತರೆಯಾಗಿ -ಲಹರಿ, ಶಕುನಿ-ರಮ್ಯ, ಶೀತಲಾಂಬ ಹಾಗೂ ಕುಮಾರಿ ಧನ್ಯರಾಜ್‌ರವರು, ಸೂತ್ರಧಾರಿ, ದುಶ್ಯಾಸನ, ಕುಂತಿ, ಹಾಗೂ ದ್ರೌಪದಿಯ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಪ್ರಜ್ವಲ್ ಜಗದೀಶ್‌ರವರ ನಿರ್ದೇಶನ ಮತ್ತು ಹಾರ್ಮೋನಿಯಂ, ಸಚಿನ್ ರಂಗರಾಜು ಮಟ್ಟನವಿಲೇ ಕ್ಯಾಶಿಯೋ, ಲೋಕಾಭಿರಾಮ್ ಮಂಡ್ಯರವರು ತಬಲ, ಕುಮಾರಣ್ಣನವರು ಕ್ಯಾರೋನೆಟ್ ಇದ್ದು, ಮೈಸೂರಿನ ಚಾಮುಂಡೇಶ್ವರಿ ಅವರ ರಂಗಸಜ್ಜಿಕೆಯಲ್ಲಿ ನಾಟಕ ಪ್ರದರ್ಶನಗೊಳಲಿದೆ.

ಮಹಾಬಜ ಮಾರುತಿ ಇಂಡಿಯನ್ ಸೇವಾ ಟ್ರಸ್ಟ್‌ನ ಅಧ್ಯಕ್ಷ ರಂಗಪ್ಪ ಚೌಡೇನಹಳ್ಳಿ, ಖಜಾಂಚಿ ಶಾರದ ಅವರ ನೇತೃತ್ವದಲ್ಲಿ ಗೆಜ್ಜೆಪೂಜೆ ಮಾಡಲಾಯಿತು. ಎಲ್ಲಾ ಮಕ್ಕಳು ಅಭೂತಪೂರ್ವವಾಗಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು.

# ನಿರಂತರ ಮಳೆ: ಕಾಫಿ ಬೆಳೆಗೆ ಹೊಡೆತ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಸಕಲೇಶಪುರ: ಹವಾಮಾನ ವೈಪರೀತ್ಯದಿಂದ ಮಲೆನಾಡು ಭಾಗದಲ್ಲಿ ನಿರಂತವಾಗಿ ಮಳೆ ಸುರಿಯುತ್ತಿರುವುದರಿಂದ ಅರೇಬಿಕಾ ಕಾಫಿ ಕೊಯ್ಲಿಗೆ ಅಡ್ಡಿಯುಂಟಾಗಿದ್ದು, ಕಾಫಿ ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಕಳೆದ ವರ್ಷ ಉತ್ತಮ ಮಳೆಯಾಗಿದ್ದರಿಂದ ಈ ವರ್ಷ ಅವಧಿಗೂ ಮುನ್ನವೇ ಕೆಲ ಪ್ರದೇಶಗಳಲ್ಲಿ ಅರೇಬಿಕಾ ಕಾಫಿ ಫಸಲಿಗೆ ಬಂದಿದ್ದು, ಕೊಯ್ಲು ಅಕ್ಟೋಬರ್ ತಿಂಗಳ ಮೊದಲ ವಾರದಿಂದಲೇ ಆರಂಭವಾಗಿದೆ. ಈಗಾಗಲೇ ಕೊಯ್ಲು ಮಾಡಿರುವ ಕಾಫಿಯನ್ನು ಒಣಗಿಸಲು ಬಿಸಿಲಿಲ್ಲ, ಮಳೆಯಿಂದ ಕೊಯ್ಲು ಮಾಡಿರುವ ಫಸಲನ್ನು ಉಳಿಸಿಕೊಳ್ಳುವುದು ಹೇಗೆಂಬ ಸಂಕಷ್ಟಕ್ಕೆ ಸಿಲುಕಿರುವ ಕಾಫಿ ಬೆಳೆಗಾರರು ಪರದಾಡುವಂತಾಗಿದೆ.

ಅರೇಬಿಕಾ ಕಾಫಿ ಧಾರಣೆ ಐತಿಹಾಸಿಕ ದಾಖಲೆ ಬರೆದಿರುವುದರಿಂದ ಈ ಬಾರಿಯೂ ಅದೇ ಧಾರಣೆ ಮುಂದುವರೆಯುವ ನಿರೀಕ್ಷೆಯಲ್ಲಿ ಬೆಳೆಗಾರರು ಕಾಫಿ ಫಸಲು ಕೊಯ್ಲು ಆರಂಭಿಸಿದ್ದಾರೆ. ಆದರೆ, ನಿರಂತವಾರವಾಗಿ ಮಳೆ ಸುರಿಯುತ್ತಿರುವುದರಿಂದ ಹಾಗೂ ಕಳೆದ ಒಂದು ವಾರದಿಂದ ಭಾರಿ ಮಳೆಯಾಗುತ್ತಿರುವುದರಿಂದ ಕಾಫಿ ಹಣ್ಣು ಉದುರುವ ಆತಂಕ ಕೂಡ ಎದುರಾಗಿದೆ.

ಕೆಲ ತೋಟಗಳಲ್ಲಿ ಕಾಫಿ ಸಂಪೂರ್ಣ ಹಣ್ಣಾಗಿ ಉದುರಲು ಪ್ರಾರಂಭವಾಗಿದೆ. ಇನ್ನು ಕೆಲ ತೋಟಗಳಲ್ಲಿ ಅರ್ಧಂಬರ್ಧ ಹಣ್ಣಾಗಿದೆ. ಕೊಯ್ಲು ಮಾಡಬೇಕೆಂನ್ನುವಷ್ಟರಲ್ಲಿ ಮಳೆ ಹಿಡಿದಿರುವುದರಿಂದ ಬೆಳೆಗಾರರು ಕೈಕಟ್ಟಿ ಕೂರುವಂತಾಗಿದೆ.

ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಾಫಿ ಪೂರೈಕೆ ಕಡಿಮೆಯಾಗಿರುವುದರಿಂದ ಪ್ರಸ್ತುತ ಅರೇಬಿಕಾ ಪಾರ್ಚ್‌ಮೆಂಟ್ 29,100 ರಿಂದ 29,200ರೂ. ಇದೆ. ಚರಿ 14,000 ರಿಂದ 14,800ರೂ. ಇದೆ. ಉತ್ತಮ ಧಾರಣೆ ಇರುವುದರಿಂದ ಕೊಯ್ಲು ಮಾಡಿ, ಮಾರಾಟ ಮಾಡಬೇಕೆಂಬ ಹಂಬಲ ಹೊಂದಿರುವ ಬೆಳೆಗಾರರಿಗೆ ಹವಮಾನ ವೈಪರೀತ್ಯದಿಂದ ಏನು ಮಾಡಬೇಕೆಂದು ದಿಕ್ಕು ತೋಚದೆ ಅಸಹಾಯಕ ಪರಿಸ್ಥಿತಿ ತಲುಪಿದ್ದಾರೆ.

ನಿರಂತರವಾಗಿ ಸುರಿಯುತ್ತಿರುವ ಮಳೆಯ ಹೊಡೆತಕ್ಕೆ ಸಿಲುಕಿ ಕಾಫಿ ಗಿಡಗಳು ಹಾನಿಗೊಳಗಾಗಿ ಇಳುವರಿಯಲ್ಲಿ ಕುಸಿತಕಂಡಿದೆ. ಫಸಲಿನ ನಷ್ಟದ ಜೊತೆಗೆ ಇಳುವರಿ ಮೇಲೂ ಈ ಬಾರಿ ಭಾರೀ ಹೊಡೆತ ಬೀಳಲಿದೆ ಎಂಬ ಆತಂಕ ಕಾಡುತ್ತಿದೆ.

# ಹಾಸನಾಂಬ ಮಹೋತ್ಸವ ಯಶಸ್ವಿ ಜಿಲ್ಲಾಡಳಿತಕ್ಕೆ ಅಭಿನಂದನೆ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಾಸನಾಂಬ ಜಾತ್ರಾ ಮಹೋತ್ಸವ ಯಶಸ್ವಿಗೊಳಿಸಿದ ಜಿಲ್ಲಾಡಳಿತದ ಎಲ್ಲಾ ಅಧಿಕಾರಿ, ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಶಿಬಿರಾರ್ಥಿಗಳಿಗೆ ಅಭಿನಂದನೆ ಸಮಾರಂಭವನ್ನು ಶೀಘ್ರದಲ್ಲೇ ಹಮ್ಮಿಕೊಳ್ಳಲಾಗುವುದೆಂದು ಕಾಂಗ್ರೆಸ್ ಮುಖಂಡ ಬಿ.ಕೆ. ಮಂಜುನಾಥ್ ಹೇಳಿದರು. ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಮಹೋತ್ಸವಕ್ಕೆ ವರ್ಷದಿಂದ ವರ್ಷಕ್ಕೆ ಬರುತ್ತಿರುವ ಸಂಖ್ಯೆಯಲ್ಲಿ ಭಾರೀ ಏರಿಕೆಯಾಗುತ್ತಿದೆ. ಕಳೆದ ಎರಡು ವರ್ಷಗಳಿಂದ ಜನದಟ್ಟಣೆ ಹೆಚ್ಚಾಗಿ ಸಮಸ್ಯೆಯಾಗಿತ್ತು. ಈ ಬಾರಿ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡ ಅವರು ಕೈಗೊಂಡ ನಿಯಮಗಳು ಯಾವುದೇ ಗೊಂದಲವಿಲ್ಲದಂತೆ ಜಾತ್ರೆ ನೆರವೇರಿದೆ. ಪಕ್ಷಬೇಧ ಮರೆತು ಎಲ್ಲರೂ ಈ ಬಾರಿಯ ವ್ಯವಸ್ಥೆಯನ್ನು ಮೆಚ್ಚಿದ್ದಾರೆ. ನಗರದ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಭವನದಲ್ಲಿ ಅಭಿನಂದನಾ ಸಮಾರಂಭ ನಡೆಯಲಿದೆ ಎಂದರು.

ಹಾಸನಾಂಬ ಜಾತ್ರಾ ಮಹೋತ್ಸವ ವೇಳೆ ಸಣ್ಣಪುಟ್ಟ ಸಮಸ್ಯೆಯಾಗಿದೆ. ದೇವಾಲಯ ಸುತ್ತಲಿನ ನಿವಾಸಿಗಳಿಗೆ ತೊಂದರೆಯಾಗಿದೆ. ಮನೆಯಿಂದ ಹೊರಬರಲು ಪರದಾಡುವ ಪರಿಸ್ಥಿತಿ ಮುಂದುವರಿದಿದೆ. ಅದರ ಬಗ್ಗೆ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಜಿಲ್ಲಾಧಿಕಾರಿ ಗಮನಕ್ಕೆ ತರಲಾಗುವುದು. ಮುಂದಿನ ವರ್ಷದ ವೇಳೆಗೆ ದೇವಾಲಯ ಸುತ್ತಲಿನ ಜಾಗ ಸ್ವಾಧೀನಪಡಿಸಿಕೊಂಡು ಮಾಲೀಕರಿಗೆ ಪರಿಹಾರ ಸಿಗುವಂತಾಗಬೇಕೆಂದು ಹೇಳಿದರು. ಸುದ್ದಿಗೋಷ್ಟಿಯಲ್ಲಿ ಮುಖಂಡ ರಾದ ಮುಬಷಿರ್ ಅಹಮದ್, ಗೋಪಾಲೇಗೌಡ, ಬಾಳ್ಳುಗೊಪಾಲ್ ಇದ್ದರು.

# ವರುಣಾರ್ಭಟಕ್ಕೆ ನೆಲ ಕಚ್ಚಿದ ಬೆಳೆ: ಪರಿಹಾರಕ್ಕೆ ಆಗ್ರಹ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಳೆದ ಒಂದು ವಾರದಿಂದ ಜಿಲ್ಲಾದ್ಯಂತ ವ್ಯಾಪಕ ಮಳೆ ಸುರಿಯುತ್ತಿದ್ದು ಬೆಳೆ ನಾಶದಿಂದ ನಷ್ಟಕ್ಕೀಡಾಗಿರುವ ರೈತರಿಗೆ ಶೀಘ್ರ ಪರಿಹಾರ ಘೋಷಿಸಬೇಕೆಂದು ರಾಜ್ಯ ರೈತ ಸಂಘ ಜಿಲ್ಲಾಧ್ಯಕ್ಷ ಬಿ.ಎಸ್. ಸೋಮಶೇಖರ್ ಒತ್ತಾಯಿಸಿದರು.

ಸುದ್ದಿಗೋಷ್ಟಿಯಲ್ಲಿ ಮಾತನಾಡಿ, ಮಲೆನಾಡು ಮಾತ್ರವಲ್ಲದೆ ಬಯಲು ಸೀಮೆ ಪ್ರದೇಶವಾದ ಚನ್ನರಾಯಪಟ್ಟಣ, ಅರಸೀಕೆರೆ ತಾಲ್ಲೂಕಿನಲ್ಲೂ ವ್ಯಾಪಕ ಮಳೆ ಸುರಿದಿದೆ.

ಜೋಳದ ಬೆಳೆ ಸಂಪೂರ್ಣ ನೆಲಕಚ್ಚಿ ಅನ್ನದಾತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಕಲೇಶಪುರ ಭಾಗದಲ್ಲಿ ಕಾಡಾನೆ ಹಾವಳಿ ಮಾತ್ರವಲ್ಲದೆ ಮಳೆಯಿಂದ ಕಾಫಿ, ಮೆಣಸು, ಏಲಕ್ಕಿ ಬೆಳೆ ನಾಮಾವಶೇಷವಾಗಿದೆ. ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಧಿಕಾರಿಗಳು ತಕ್ಷಣವೇ ಕಾರ್ಯಪ್ರವೃತ್ತರಾಗಿ ಸಮೀಕ್ಷೆ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಬೇಕೆಂದು ಆಗ್ರಹಿಸಿದರು.

ಜಿಲ್ಲೆಯ ಹಲವೆಡೆ ಧಾರಾಕಾರ ಮಳೆಯಿಂದ ಸಂಪರ್ಕ ರಸ್ತೆಗಳು ಕುಸಿದಿವೆ. ವಿದ್ಯುತ್ ಕಂಬಗಳು ಧರೆಗುರುಳಿದ ಕತ್ತಲು ಆವರಿಸಿದೆ. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ವಹಿಸದೆ ಸಮಸ್ಯೆಗೆ ಪರಿಹಾರ ಕಲ್ಪಿಸುವತ್ತ ಗಮನಹರಿಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಟಿಯಲ್ಲಿ ರಾಜ್ಯ ರೈತ ಸಂಘದ ಜಿಲ್ಲಾ ಗೌರವಾಧ್ಯಕ್ಷ ಎಸ್. ಆರ್. ವರದೇಗೌಡ, ಉಪಾಧ್ಯಕ್ಷ ವಾಜಿದ್ ಬೇಗ್, ಶರತ್, ನವೀನ್ ಗೌಡ ಇದ್ದರು.

# 2 ದಿನಗಳ ಹಾಸನಾಂಬ ಚಲನಚಿತ್ರೋತ್ಸವ ಯಶಸ್ವಿ




ಹಾಸನ: ಜಿಲ್ಲಾಡಳಿತ , ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮ್ಯಾಕ್ಸ್‌ಕಾನ್, ಡ್ರೀಮ್ ಸ್ಟುಡಿಯೋ ಎಂಟರ್ಟೈನ್ಮೆಂಟ್, ವೆಂಚರ್ ಮೂವೀಸ್ ವತಿಯಿಂದ ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ ಎರಡು ದಿನಗಳ ಹಾಸನಾಂಬ ಚಲನಚಿತ್ರೋತ್ಸವ ಅ.19 ಮತ್ತು 20 ರಂದು ಯಶಸ್ವಿಯಾಗಿ ನೆರವೇರಿತು. ಚಲನಚಿತ್ರೋತ್ಸವದಲ್ಲಿ 10 ಕಿರುಚಿತ್ರ, 2 ವಿಶೇಷ ಕಿರುಚಿತ್ರ ಮತ್ತು 3 ಕನ್ನಡ ಚಲನಚಿತ್ರ ಪ್ರದರ್ಶನ ಕಂಡವು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಮಹಾನಗರ ಪಾಲಿಕೆ ಉಪ ಮೇಯರ್ ಹೇಮಲತಾ ಕಮಲ್ ಕುಮಾರ್, ನಗರಸಭೆ ಮಾಜಿ ಸದಸ್ಯ ಕಮಲ್ ಕುಮಾರ್, ನಟಿ ನಿಸರ್ಗ ಅಣ್ಣಪ್ಪ, ಯುವ ನಿರ್ದೇಶಕ ಪ್ರದೀಪ್, ಕಾರ್ಯಕ್ರಮದ ಮಾಧ್ಯಮ ಪಾಲುದಾರ ತೌಫಿಕ್ ಅಹಮ್ಮದ್ ಮತ್ತು ಆಯೋಜಕ ಗುರು ಪ್ರಸಾದ್ ಪಾಲ್ಗೊಂಡಿದ್ದರು. ಆಯ್ಕೆಯಾದ ಉತ್ತಮ ಕಿರುಚಿತ್ರಗಳಿಗೆ ವಿವಿಧ ವಿಭಾಗಳಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸ್ಟಾನಿ ಜೋಯ್ಸನ್, ಶಕೀಲ್ ಅಹಮ್ಮದ್, ಪ್ರಶಾಂತ್ ಹಾಸನ್, ಪರಮೇಶ್ ದೊಡ್ಡಮಗ್ಗೆ, ದೇವರಾಜ್ ರಾಯಚೂರು, ಜೀವನ್ ರತ್ನ, ವಿನಾಯಕ್ ಬಿದಾರ್, ನಾಗರಾಜ್ ಭಂಡಾರಿ ಅವರ ಪ್ರಾಯೋಜಕತ್ವದಲ್ಲಿ ಚಲನಚಿತ್ರೋತ್ಸವ ನಡೆಯಿತು.

# ದಾಕ್ಷಾಯಣಮ್ಮ ನಿಧನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನಗರದ ಆರ್.ಸಿ. ರಸ್ತೆಯಲ್ಲಿರುವ ಅವನಿ ಆರ್ಗಾನಿಕ್ಸ್ ಮಾಲೀಕ ಜಯಪ್ರಸಾದ್ ಬಳ್ಳೇಕೆರೆ ಅವರ ತಾಯಿ ದಾಕ್ಷಾಯಣಮ್ಮ (62) ಅವರು ಬುಧವಾರ ನಿಧನರಾದರು.

ಅವರು ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಮೃತರಿಗೆ ಇಬ್ಬರು ಪುತ್ರರು, ಪುತ್ರಿ ಇದ್ದಾರೆ. ಹುಟ್ಟೂರಾದ ತಿಪಟೂರು ತಾಲ್ಲೂಕು ಬಳ್ಳೇಕೆರೆಯಲ್ಲಿ ಗುರುವಾರ ಅಂತ್ಯಕ್ರಿಯೆ ನೆರವೇರಿತು.

# ಇತಿಹಾಸದಲ್ಲಿ ಈ ದಿನ

## ಅಕ್ಟೋಬರ್-24

**1945:** ವಿಶ್ವಶಾಂತಿಗಾಗಿ ಸಂಯುಕ್ತ ರಾಷ್ಟ್ರ ಸಂಘ ಅಧಿಕೃತವಾಗಿ ಸ್ಥಾಪನೆಯಾಯಿತು. ಈ ದಿನವನ್ನು ಪ್ರತಿ ವರ್ಷ 'ವಿಶ್ವ ಸಂಯುಕ್ತ ರಾಷ್ಟ್ರ ದಿನ' ಎಂದು ಆಚರಿಸಲಾಗುತ್ತದೆ.

**2003:** ಅಮೇರಿಕಾದ ಪ್ರಥಮ ಕಂಪ್ಯೂಟರ್ UNIVAC ಯ 50ನೇ ವಾರ್ಷಿಕೋತ್ಸವ ಆಚರಿಸಲಾಯಿತು.

**1901:** ಆನೀ ಎಡ್ಸನ್ ಟೇಲರ್ ಅವರು ನಯಾಗ್ರಾ ಜಲಪಾತವನ್ನು ಬ್ಯಾರೆಲ್‌ನಲ್ಲಿ ದಾಟಿದ ಮೊದಲ ಮಹಿಳೆ.

**1957:** ಸೋವಿಯತ್ ಒಕ್ಕೂಟವು ಸ್ಪುಟ್ನಿಕ್1 ಉಡಾವಣೆ ಯಶಸ್ಸಿನ ಬಳಿಕ ಕೃತಕ ಉಪಗ್ರಹಗಳ ಅಭಿವೃದ್ಧಿಯಲ್ಲಿ ಮುಂದಿನ ಹಂತಕ್ಕೆ ಹೆಜ್ಜೆಯಿಟ್ಟಿತು.

**1970:** ಚೀನಾದ ಪೀಪಲ್ಸ್ ರಿಪಬ್ಲಿಕ್ ಸಂಯುಕ್ತ ರಾಷ್ಟ್ರ ಸಂಸ್ಥೆಯ ಸದಸ್ಯತ್ವ ಪಡೆದಿತು.

**1954:** ಭಾರತ ಮತ್ತು ಚೀನಾ ನಡುವಿನ ಪಂಚಶೀಲ ಒಪ್ಪಂದಟದ ನಂತರ ನೆಹರುಚೌ ಎನ್ ಲೈ ಭೇಟಿಯು ಮಹತ್ವ ಪಡೆದಿತು.

**1964:** ಭಾರತದ ಮೊದಲ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ್ ನೆಹರು ಅವರ ಕೊನೆಯ ಸಾರ್ವಜನಿಕ ಭಾಷಣ.

**1989:** ಭಾರತೀಯ ಫುಟ್‌ಬಾಲ್ ತಂಡವು ಸಾಫ್ ಕಪ್‌ನಲ್ಲಿ ಮೊದಲ ಬಾರಿಗೆ ಚಾಂಪಿಯನ್ ಪಟ್ಟ ಗೆದ್ದಿತು.

### ಜನನ

**1909:** ಡಾ. ಎಸ್.ಕೆ. ಬ್ಯಾನರ್ಜಿ, ಭಾರತೀಯ ಸಾಮಾಜಿಕ ಸುಧಾರಕ

**1931:** ಹಾಸ್ಯನಟ ಮತ್ತು ಸಂಗೀತ ನಿರ್ದೇಶಕ ಶ್ರೀದೇವಿ ಚಂದ್ರಶೇಖರ್

### ಮರಣ

**1991:** ಪ್ರಸಿದ್ಧ ಕನ್ನಡ ಕವಿ ಡಾ. ತಿಮ್ಮನಹಳ್ಳಿ ನರಸಿಂಹಾಚಾರ್ಯ

# ನ. 2ಕ್ಕೆ ನಾಲ್ಕು ಕೃತಿಗಳ ಲೋಕಾರ್ಪಣೆ-ಕವಿಗೋಷ್ಠಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಾಣಿಕ್ಯ ಪ್ರಕಾಶನ ವತಿಯಿಂದ ನ. 2ರ ಭಾನುವಾರ ನಗರದ ಸಂಸ್ಕೃತ ಭವನದಲ್ಲಿ ಹಮ್ಮಿಕೊಳ್ಳುವ ದಶಮಾನೋತ್ಸವ ಕಾರ್ಯಕ್ರಮದಲ್ಲಿ ನಾಲ್ಕು ಕೃತಿಗಳ ಲೋಕಾರ್ಪಣೆ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಾಶಕಿ ದೀಪಾ ಉಪ್ಪಾರ್ ತಿಳಿಸಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಡಾ. ಬಾ.ನಂ.ಲೋಕೇಶ್ ವಹಿಸಲಿದ್ದಾರೆ. ಜಿಲ್ಲಾ ಲೇಖಕಿಯರ ಬಳಗದ ಅಧ್ಯಕ್ಷೆ ರಾಜೇಶ್ವರಿ ಹುಲ್ಲೇನಹಳ್ಳಿ ಆಶಯ ನುಡಿಗಳನ್ನಾಡಲಿದ್ದಾರೆ. ಹಿರಿಯ ಸಾಹಿತಿ ಗೊರೂರು ಅನಂತರಾಜು ಅವರು ಸಾಹಿತಿ ಎಚ್.ಎಸ್. ಬಸವರಾಜು ಅವರ ಬಿಡಿ ಲೇಖನಗಳ ಅಗುಚ್ಚಟ ಕೃತಿ ಲೋಕಾರ್ಪಣೆ ಮಾಡಿ ಮಾತನಾಡಲಿದ್ದಾರೆ.

ಸಾಹಿತಿ ಬಿ.ಎಂ. ಭಾರತಿ ಹಾದಿಗೆಯವರು ಯುವ ಸಾಹಿತಿ ವಾಸು ಸಮುದ್ರವಳ್ಳಿಯವರ ವಿಮರ್ಶಾ ಲೇಖನಗಳ ಅಒಳಗಣ್ಣುಟಿ ಕೃತಿ ಲೋಕಾರ್ಪಣೆ ಮಾಡಿ ಮಾತನಾಡಲಿದ್ದಾರೆ. ಕವಯಿತ್ರಿ ವಾಣಿ ಮಹೇಶ್‌ರವರು ಸಾಹಿತಿ ಹೊ.ರಾ.ಪರಮೇಶ್‌ರವರ ಅಸಜ್ಜನ ಕನ್ನಡ ಕವಿಗಳುಟ ಕೃತಿ ಲೋಕಾರ್ಪಣೆ ಮಾಡಿ ಮಾತನಾಡಲಿದ್ದಾರೆ. ಕವಯಿತ್ರಿ ಕೆ.ಸಿ. ಗೀತಾರವರು ಚಿಕ್ಕಮಗಳೂರಿನ ಸಾಹಿತಿ ದೀಪಕ್ ನಿಡಘಟ್ಟರವರ ಪತ್ತೆದಾರಿ ಕಾದಂಬರಿ ಅಮಾಯಾಗಿರಿಯ ನೆರಳುಟ ಕೃತಿ ಲೋಕಾರ್ಪಣೆ ಮಾಡಿ ಮಾತನಾಡಲಿದ್ದಾರೆ.

ನಂತರ ನಡೆಯುವ ಅಂತರಾಜ್ಯಮಟ್ಟದ ಕವಿಗೋಷ್ಠಿಯಲ್ಲಿ ರುಮಾನ ಜಬೀರ್, ಎಚ್.ಬಿ.ಚೂಡಾಮಣಿ, ಚಂದನ ಚನ್ನರಾಯಪಟ್ಟಣ, ಪರಮಾನಂದ ದಳಪತಿ, ಮುಂಬಯಿ; ವೆಂಕಮ್ಮ ಡಿ. ಗಾಂವ್ಕರ್, ದಾಂಡೇಲಿ: ಚಂದ್ರಕಲಾ ಎಂ. ಆಲೂರು: ಲಲಿತ ಎಸ್, ಸಕಲೇಶಪುರ: ರೂಪೇಶ್ ಸಾಗರ, ಶಿವಮೊಗ್ಗ: ಮಲ್ಲೇಶ್ ಜಿ. ಹಾಸನ: ಚಂದ್ರು ಪಿ. ಗೌಡ, ಆಲೂರು; ಯು. ಎಸ್. ಅಯ್ಯಪ್ಪ, ಮಂತ್ರಾಲಯ; ತಾಸೀನಾ ರಝಾಕ್, ಬೇಲೂರು; ಲತಾ ಎ. ಆರ್. ಬಾಳೆಹೊನ್ನೂರು; ವೀರೇಶ್ ಎಸ್. ಕುಬಸದ್, ಅಣ್ಣಿಗೇರಿ; ಮಂಜುನಾಥ್ ಎಚ್. ಚಿರಕನಹಳ್ಳಿ; ಗೀತಾ ವಿ. ಹಸ್ಮಕಲ್, ತರೀಕೆರೆ; ನವ್ಯ ಯಶವಂತ ಚಿಕ್ಕೋಟೆ; ಜಯಶಂಕರ್ ಬೆಳಗುಂಬ; ಸಿಲ್ವೆಸ್ಟರ್ ಕ್ರಾಸ್ತ, ಬಿಳಗವಳ್ಳಿ; ರಾಣಿ ರವೀಂದ್ರ, ಕೊಡಗು; ಪೂಜಾ ಬಿ. ಕೊಂಡಿಕೊಪ್ಪ, ಧಾರವಾಡ; ಭಾರತಿ ಎಚ್.ಎನ್. ಹಾಸನ; ಪಾತರಾಜು ಎಸ್.ಡಿ. ಹಾಸನ; ಡಾ. ರಕ್ಷಾ ಸೇರಿದಂತೆ ಹಲವು ಕವಿಗಳು ವಿವಿಧ ರಾಜ್ಯಗಳಿಂದ ಭಾಗವಹಿಸಲಿದ್ದಾರೆ.

# ಬ್ರಿಟಿಷರ ವಿರುದ್ಧ ಸಮರ ಸಾರಿದ ಕಿತ್ತೂರು ರಾಣಿ ಚನ್ನಮ್ಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ಮಹಿಳಾ ಸಬಲೀಕರಣದ ಸರ್ವೋತ್ತಮ ಉದಾಹರಣೆಯಲ್ಲಿ ಹಾಗೂ ಶೌರ್ಯದಲ್ಲಿ ಮೊದಲನೇ ಸ್ಥಾನದಲ್ಲಿ ಕಿತ್ತೂರು ರಾಣಿ ಚನ್ನಮ್ಮ ಅವರು ಇದ್ದಾರೆ ಎಂದು ಅಪರ ಜಿಲ್ಲಾಧಿಕಾರಿ ವಿ. ಮಂಜುನಾಥ್ ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಹಾಸನಾಂಬ ಕಲಾಕ್ಷೇತ್ರದಲ್ಲಿ ಗುರುವಾರ ಆಯೋಜಿಸಿದ್ದ ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಅಧ್ಯಕ್ಷತೆ ವಹಿಸಿ ಮಾತನಾಡಿ, ರಾಣಿ ಚನ್ನಮ್ಮ ಅವರಿಂದ ಕಡ್ಡಾಯವಾಗಿ ಕಲಿಯಲೇಬೇಕಾದ ವಿಷಯಗಳೆಂದರೆ ಭಾರತೀಯ ಪರಂಪರೆಯಲ್ಲಿ ನಾರಿಯ ಶಸಸ್ತ್ರೀಕರಣದ ವಿಶೇಷ ಸೌಭಾಗ್ಯ, ಹೆಣ್ಣು ಮಕ್ಕಳ ಶಿಕ್ಷಣ. ನಮ್ಮ ಒಗ್ಗಟ್ಟು, ಸಂಸ್ಕಾರ, ದೇಶಭಕ್ತಿ ಇವುಗಳನ್ನು ಕಲಿಯಬೇಕುಎಂದರು.

ಈ ಹಿಂದೆ ಸ್ವಾತಂತ್ರ್ಯ ಹೋರಾಟದಲ್ಲಿ ಹೆಣ್ಣು ಮಕ್ಕಳು ಬಹಳ ವಿರಳವಾಗಿ ಕಾಣುತ್ತಿದ್ದರು. ಅದಕ್ಕೆ ಕಾರಣ ಶಿಕ್ಷಣ ಮತ್ತು ಹೆಣ್ಣಿಗೆ ಎಲ್ಲಿಯೂ ಮುಕ್ತವಾದ ಅವಕಾಶಗಳನ್ನು ನೀಡುತ್ತಿರಲಿಲ್ಲ ಎಂಬುದಾಗಿದೆ. ಆದರೆ ಇಂದು ಆದಾಯದ ದೃಷ್ಟಿಯಿಂದ ಉದ್ದೇಶದಿಂದ ಅಂಜಿಕೆಯಲ್ಲಿ ಮಕ್ಕಳನ್ನು ಬೆಳೆಸುತ್ತಿದ್ದೇವೆ. ಸೈನಿಕರಾಗಿ ದೇಶಕ್ಕಾಗಿ ಸೇವೆ ಸಲ್ಲಿಸಲು ಕಳುಹಿಸುತ್ತಿರುವುದು ಬಹಳ ಕಡಿಮೆ. ಹಾಗಾಗಿ ದೇಶ ಸೇವೆಗಾಗಿ ಧೈರ್ಯ, ಶೌರ್ಯದಿಂದ ಹೋರಾಟ ಮಾಡುವ ಸ್ವಭಾವವನ್ನು ನಮ್ಮ ಮಕ್ಕಳಲ್ಲಿ ಬೆಳೆಸಬೇಕು. ಆಗ ಮಾತ್ರ ನಾವು ಮತ್ತೆ ಉತ್ತಮವಾದ ಸಮಾಜವನ್ನು ನಿರ್ಮಾಣ ಮಾಡಬಹುದು. ಕಿತ್ತೂರು ರಾಣಿ ಚನ್ನಮ್ಮ ನಂತಹ ಅನೇಕರನ್ನು ಹುಟ್ಟಿ ಹಾಕಬಹುದು ಎಂದು ತಿಳಿಸಿದರು.

ಆಲೂರು ತಾಲ್ಲೂಕು ಕಾರ್ಜುವಳ್ಳಿಯ ಶ್ರೀ ಸಂಸ್ಥಾನ ಹಿರೇಮಠದ ಶ್ರೀ ಸದಾಶಿವ ಸ್ವಾಮೀಜಿ ಮಾತನಾಡಿ, ತೊಟ್ಟಿಲು ತೂಗುವ ಕೈ ಮನಸ್ಸು ಮಾಡಿದರೆ ಜಗತ್ತನ್ನೇ ಆಳಬಹುದು ಎಂಬುದಕ್ಕೆ ಪ್ರತ್ಯಕ್ಷ ಉದಾಹರಣೆ ಕಿತ್ತೂರು ರಾಣಿ ಚನ್ನಮ್ಮ. ದಿಟ್ಟತನದಿಂದ ಒಂದು ಸಂಸ್ಥಾನವನ್ನು ನಡೆಸಿ ಇಡೀ ದೇಶವನ್ನು ಆಕ್ರಮಿಸಿಕೊಂಡಿದ್ದ ಸೂರ್ಯ ಮುಳುಗದ ಆಡಳಿತ ವ್ಯವಸ್ಥೆಯ ವಿರುದ್ಧ ಒಬ್ಬ ಹೆಣ್ಣುಮಗಳು ಯುದ್ಧ ಕಹಳೆ ಊದುತ್ತಾಳೆ ಎಂದರೆ ಅವಳ ಧೈರ್ಯವನ್ನು ನಾವೆಲ್ಲರೂ ಶ್ಲಾಘಿಸಬೇಕು ಎಂದರು.

ಯುದ್ಧ ಮಾಡುವ ಕಲೆ, ಬಿಲ್ಲು ಬಾಣ, ಬೇಟೆಯಾಡುವುದು ಹೀಗೆ ಎಲ್ಲಾ ಕೌಶಲ್ಯವನ್ನುಅವರ ತಂದೆ ತಾಯಿ ಚನ್ನಮ್ಮ ಅವರಿಗೆ ಕಲಿಸಿದ್ದುದರಿಂದ ಇಂದು ಅವರನ್ನು ನೆನಪಿಸಿಕೊಳ್ಳಲು ಸಾಧ್ಯವಾಗಿದೆ. ಹಾಗಾಗಿ ಅವರ ಹೆತ್ತತಂದೆ-ತಾಯಿಯರಿಗೂ ಸಹ ಈ ಸಮಯದಲ್ಲಿ ಧನ್ಯವಾದಗಳನ್ನು ತಿಳಿಸಬೇಕು ಎಂದರು.

ಇಂದು ನಾವು ಮಕ್ಕಳನ್ನು ಹೇಗೆ ಬೆಳೆಸುತ್ತಿದ್ದೇವೆ. ಹಿಂದೆ ಕಿತ್ತೂರು ರಾಣಿ ಚನ್ನಮ್ಮನನ್ನುಅವರ ತಂದೆ ತಾಯಿ ಹೇಗೆ ಬೆಳೆಸಿದರು ಎಂಬುದನ್ನುನಾವು ತುಲನೆ ಮಾಡಬೇಕು. ಚನ್ನಮ್ಮ ಆಗಿನ ಕಾಲದಲ್ಲಿಯೇ 64 ವಿದ್ಯೆಗಳನ್ನು ಕಲಿತಿದ್ದರು. ಇಂದು ನಮ್ಮ ಮಕ್ಕಳಿಗೆ ನಾವು ಎಷ್ಟು ರೀತಿಯ ವಿದ್ಯೆಗಳನ್ನು ಕಲಿಸಿದ್ದೇವೆ ಎಂಬುದನ್ನುಆಲೋಚಿಸಬೇಕು. ಹೇಳಿದ್ದನ್ನು ಕಾರ್ಯರೂಪಕ್ಕೆ ತಂದರೆ ನಮ್ಮ ದೇಶ ಮತ್ತೆಉನ್ನತ ಸ್ಥಾನಕ್ಕೆ ಹೋಗುವುದರಲ್ಲಿ ಸಂಶಯವಿಲ್ಲ ಎಂದರಲ್ಲದೆ, ಮಕ್ಕಳನ್ನು ಸಂಸ್ಕಾರಯುತವಾಗಿ ಬೆಳೆಸಬೇಕು. ಸಾಧನೆ ಮಾಡಲು ಮನಸ್ಸಿರುವ ಹೆಣ್ಣು ಮಕ್ಕಳಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕುಇದರ ಮೂಲಕ ನಾವು ಚೆನ್ನಮ್ಮನವರಿಗೆಕೃತಜ್ಞತೆಸಲ್ಲಿಸಿದ ಹಾಗೆ ಆಗುತ್ತದೆ ಎಂದು ತಿಳಿಸಿದರು.

ಹಳೇಕೋಟೆಯ ಸರ್ಕಾರಿ ಪದವಿ ಪೂರ್ವಕಾಲೇಜಿನ ಪ್ರಾಂಶುಪಾಲೆ ಜಯಶೀಲಮ್ಮ ಮಾತನಾಡಿ, ಬ್ರಿಟಿಷರ ವಿರುದ್ಧ ಹೋರಾಟ ಮಾಡಿ ಸ್ವಾತಂತ್ರ್ಯದ ಕಿಚ್ಚು ಹೆಚ್ಚಿಸಿದ ಪ್ರಪ್ರಥಮ ಮಹಿಳೆ ಕಿತ್ತೂರು ರಾಣಿ ಚನ್ನಮ್ಮ ಆಗಿದ್ದಾರೆ. ಇವರು ಮನುಕುಲಕ್ಕೆ ಮಹತ್ತರವಾದ ಕೊಡುಗೆ ನೀಡಿದ್ದಾರೆ ಎಂದುತಿಳಿಸಿದರು.

ರಾಣಿಚೆನ್ನಮ್ಮ ತನ್ನಜನರಿಗೆ ಸ್ಪೂರ್ತಿಯನ್ನುತುಂಬಿ, ಬ್ರಿಟಿಷರ ವಿರುದ್ಧ ಹೋರಾಡಿದ ಧೀರ ಮಹಿಳೆ. ಬಹಳ ವೀರ ವೇಷದಿಂದ ಪುಟ್ಟ ಸಂಸ್ಥಾನದಒಡತಿಯಾಗಿ ಬ್ರಿಟಿಷರಿಗೆ ಸೋಲಿನ ರುಚಿ ತೋರಿಸಿದವಳು. ಅವರುಸಾಗಿಬಂದ ಹಾದಿ ಸುಗಮವಾಗಿರಲಿಲ್ಲ, ಸತತ ಪರಿಶ್ರಮದಿಂದ ಸಾಧನೆ ಮಾಡಿ ಮನುಕುಲಕ್ಕೆ ಇಂದಿನ ಯುವ ಪೀಳಿಗೆಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ. ಇಂತಹ ಮಹನೀಯರನ್ನುಅನುಕರಣೆ ಮಾಡಬೇಕುಎಂದರು.

ಬ್ರಿಟಿಷರನ್ನು ಎದುರಿಸಿ ನಿಂತ ಏಕೈಕ ಸಂಸ್ಥಾನ ಕಿತ್ತೂರು ಅದರ ರಾಣಿ ಚೆನ್ನಮ್ಮ. ಇವರು ಸ್ವಾತಂತ್ರ್ಯಹೋರಾಟ ಮಾಡಿ ಬ್ರಿಟಿಷರಿಗೆ ಭಯ ಹುಟ್ಟಿಸಿದವರಾಗಿದ್ದಾರೆ. ಬಿಲ್ಲು ಬಾಣಗಳ ಪ್ರಯೋಗ, ಪುರುಷರಿಗೆ ಮೀಸಲಾಗಿದ್ದ ಕುದುರೆ ಸವಾರಿ ಎಲ್ಲವನ್ನು ಕಲಿತಿದ್ದರು ಹಾಗೂ ಯಾವರಾಜನಿಗೂ ಕಡಿಮೆ ಇಲ್ಲ ಎನ್ನುವಂತೆ ಮೀನಿನಂತೆ ಈಜುತ್ತಿದ್ದರು. ಯುದ್ಧ, ಸಮರಕಲೆ, ಬಿಲ್ಲು ಬಾಣಹೂಡುವುದರಲ್ಲಿ, ಬೇಟೆಯಾಡುವುದರಲ್ಲಿ ಹೀಗೆ ಸಾಹಸದಲ್ಲಿ ಕ್ಷತ್ರಿಯಳಾಗಿ, ಸಂಗೀತ ಮತ್ತು ಸಾಹಿತ್ಯದಲ್ಲಿ ಸರಸ್ವತಿಯಾಗಿ, ಸೌಂದರ್ಯದ ಗಣಿಯಾಗಿ, ಗಂಭೀರ ಸ್ವಭಾವದವಳಾಗಿ, ಭಾರತೀಯ ನಾರಿಯರಿಗೆ ಇರಬೇಕಾದ ಎಲ್ಲಾ ರೀತಿಯ ವಿದ್ಯೆಗಳಲ್ಲಿ ನೈಪುಣ್ಯತೆಯನ್ನು ಹೊಂದಿದ್ದಳು ಎಂದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248